

# ಕಲ್ಲಿನ ಮುಖಗಳ ಮ್ಯೂಸಿಯಂ!

ಜಪಾನ್ ದೇಶದ ಟೋಕಿಯೋದ ವಾಯವ್ಯ ದಿಕ್ಕಿನಲ್ಲಿರುವ ಚಿಚಿಬು ಎಂಬಲ್ಲಿ ಅಪರೂಪವೆನಿಸುವ ಕಲ್ಲುಗಳ ಮ್ಯೂಸಿಯಂ ಇದೆ. ಇಲ್ಲಿ ನೀವು ಭೂ ವಿಜ್ಞಾನದ ಬಗ್ಗೆ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಇಲ್ಲಿನ ಕಲ್ಲುಗಳ ಸಂಗ್ರಹವು ನಿಮಗೆ ಕೌತುಕವನ್ನುಂಟು ಮಾಡುವುದು ಖಂಡಿತ. ಈ ಪ್ರದರ್ಶನದಲ್ಲಿ ಎಲ್ವಿಸ್ ಪ್ರಿಸ್ಲೆ ರಾಕ್, ದಿ ಬೋರಿಸ್ ಎಲ್ಟ್ಸೀನ್ ರಾಕ್, ದಿ ಜೀಸಸ್ ರಾಕ್, ದಿ ನೆಮೊ ರಾಕ್, ದಿ ಡಾಂಕಿ ಕಾಂಗ್ ರಾಕ್ ಮುಂತಾದ ಖ್ಯಾತನಾಮರನ್ನು ಹೋಲುವ ಕಲ್ಲುಗಳಿವೆ!

ಜಪಾನ್ ಭಾಷೆಯಲ್ಲಿ ಚಿನ್ಸೆಕಿಕನ್ ಎಂದರೆ ಕುತೂಹಲಕಾರಿ ಕಲ್ಲುಗಳ ಸಭಾಂಗಣ (ಹಾಲ್ ಆಫ್ ಕ್ಯೂರಿಯಸ್ ರಾಕ್) ಎಂಬರ್ಥವಿದೆ. ಇಲ್ಲಿ 1700 ಕ್ಕೂ ಹೆಚ್ಚು ಕಲ್ಲಿನ ಮಾದರಿಗಳಿವೆ. ಅದರಲ್ಲಿ ಸುಮಾರು 900 ಮಾದರಿಗಳು ಮನುಷ್ಯನ ಮುಖವನ್ನು ಹೋಲುತ್ತವೆ. ಯಾವುದೇ ಬದಲಾವಣೆ ಮಾಡದೇ ಶೇಕಡಾ 100 ರಷ್ಟು ಸ್ವಾಭಾವಿಕವಾಗಿರುವ ಈ ಕಲ್ಲುಗಳು ಖ್ಯಾತನಾಮರನ್ನು, ಧಾರ್ಮಿಕ ವ್ಯಕ್ತಿಗಳನ್ನು, ಸಿನಿಮಾರಂಗದ ವ್ಯಕ್ತಿಗಳನ್ನು ಹೋಲುತ್ತವೆ. ಇವುಗಳನ್ನು ನೋಡುತ್ತಿದ್ದರೆ ನಿಮ್ಮ ಮೊಗದಲ್ಲಿ ಮಂದಹಾಸ ಮೂಡುವುದು ಖಚಿತ.

ಕಲ್ಲುಗಳ ಕಟ್ಟಾ ಸಂಗ್ರಹಕಾರ ಶೋಜೊ ಹಯಾಮಾ ಎಂಬಾತ ಮಾನವ ಮುಖವನ್ನು ಹೋಲುವ ಕಲ್ಲುಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದ. ಈತನ 50 ವರ್ಷಗಳ ಪರಿಶ್ರಮವೇ ಈ ಮ್ಯೂಸಿಯಂ ಪ್ರಾರಂಭವಾಗಲು ಕಾರಣ. 2010 ರಲ್ಲಿ ಈತ ಗತಿಸಿದ ನಂತರ ಈತನ ಪತ್ನಿ ಯಾಶಿಕೊ ಹಯಾಮಾಳು ಮ್ಯೂಸಿಯಂನ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾಳೆ.

■ ವಿದ್ಯಾ ವಿ. ಹಾಲಭಾವಿ

